(d) An agreement to complete the works of this tank before end of March 1975 was entered into.

(e) Work has been done for 9 months excluding the rainy season of 3 months There is still 3 months period for completion of work.

(f) Notice has been issued to the concerned contractor to complete the work within the prescribed time limit, *viz.*, before the end of March 1975 though the progress of the work appears to be slow.

(g) The concerned contractor has been instructed to complete the work within the prescribed time limit by issuing notices from time to time. Now the work is in full swing. If the work is not completed before March 1975 action will be taken as per terms of agreement.

ಶ್ರೀ ಚೌಡರೆಡ್ಡಿ.— ಸ್ವಾಮಿ, ವಾಟರ್ ಟ್ಯಾಂಕ್ ೧೯೭೩ರ ನವೆಂಬರ್‌ನಲ್ಲಿ ಪ್ರಾರಂಭಿಸಲಾಯಿತು, ೧೯೭೫ರ ಮಾರ್ಚಿಯೊಳಗೆ ಮುಗಿಯಬೇಕು ಎಂದು ಹೇಳಿದ್ದೀರಿ, ಇದಕ್ಕೆ ಬೇಕಾದಂಥ ಸಿಮೆಂಟ್ ಮತ್ತು ಸ್ಟೀಲ್ ಕೊಟ್ಟು ಬಹಳ ದಿವಸ ಆಗಿದೆ. ಅಲ್ಲಿ ದುರುಪಯೋಗ ಆಗಿರುವುದು ಕಂಡುಬರುತ್ತದೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಡಿ. ಕೆ. ನಾಯ್ಕರ್.— ನಮ್ಮಲ್ಲಿ ಅಗ್ರಿಮೆಂಟ್ ಪ್ರಕಾರ ೧೯೭೫ರ ಮಾರ್ಚಿಯೊಳಗೆ ಮುಗಿಸಬೇಕು ಎಂದು ಇದೆ. ಅಷ್ಟರಲ್ಲಿ ಇದರ ಬಗ್ಗೆ ತಾವು ಪ್ರಶ್ನೆ ಕೇಳಿದ್ದೀರಿ. ಎಷ್ಟು ಸಿಮೆಂಟ್ ಎಷ್ಟು ಕಬ್ಬಿಣ ಕೊಟ್ಟಿದ್ದೇವೆ ಎಂದು ತಿಳಿಸಿದ್ದೇವೆ. ಒಂದುವೇಳೆ ಅವರು ಕರಾರು ಪ್ರಕಾರ ಮಾಡದೇ ಇದ್ದರೆ, ಕರಾರಿನಲ್ಲಿ ಇದ್ದಂತೆ ಅವರ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಚೌಡರೆಡ್ಡಿ.— ಸ್ವಾಮಿ, ಈಗಾಗಲೇ ಒಂದು ವರ್ಷ ನಾಲ್ಕು ತಿಂಗಳು ಆಗುತ್ತಾ ಬಂದಿದೆ, ಅಲ್ಲಿ ಕೆಲಸ ಇನ್ನು ಕಾಲು ಭಾಗ ನಡೆದಿಲ್ಲ, ಇವರಿಗೆ ತಾವು ನೋಟೀಸ್ ಕೋಟಿದ್ದೇವೆ ಎಂದು ಹೇಳಿದ್ದೀರಿ, ತಾವು ಯಾವಾಗ ನೋಟೀಸ್ ಕೊಟ್ಟಿದ್ದೀರಿ?

ಶ್ರೀ ಡಿ. ಕೆ. ನಾಯಂಕ್ಕರ್.— ಅವರಿಗೆ ಮಾರ್ಚಿ ತಿಂಗಳು ಅಖೈರು ಒಳಗಾಗಿ ಕೆಲಸ ಮುಗಿಸಬೇಕು ಎಂದು ಅವರಿಗೆ ತಿಳಿಸಿದ್ದೇವೆ. ಈಗ ಮಾರ್ಚಿ ತಿಂಗಳು ಅಖೈರು ಆಗುವವರೆಗೂ ಯಾವ ಕ್ರಮ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಚೌಡರೆಡ್ಡಿ.— ಸ್ವಾಮಿ, ಇವರಿಗೆ ಏಳು ಎಂಟು ಕೆಲಸಗಳಿದ್ದು ಯಾವುದೇ ಒಂದು ಕೆಲಸವನ್ನು ಪೂರ್ತಿ ಮಾಡಿಲ್ಲ, ಜೊತೆಗೆ ಈ ಕೆಲಸ ಕೊಟ್ಟು ಒಂದು ವರ್ಷ ನಾಲ್ಕು ತಿಂಗಳಾಗಿದೆ. ಮಾರ್ಚಿ ತಿಂಗಳಲ್ಲಿ ಮುಗಿಸದಿದ್ದರೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.— ಯಾವರೀತಿ ಲುಕ್ಸಾನು ಆಗುತ್ತದೆ, ಅದನ್ನು ವಸೂಲಿ ಮಾಡುವುದಕ್ಕೆ ಅಗ್ರಿಮೆಂಟ್ ಪ್ರಕಾರ ಕ್ರಮತೆಗೆದುಕೊಳ್ಳಲಿಕ್ಕೆ ಬರುತ್ತದೆ.

**Declaring North Kanara District as Most Backward Area*

442. SMT. RADHA BHAT (Ankola).— Will the Chief Minister be pleased to state:—

(*a*) the areas in the State which are declared as most backward ;

(*b*) the criterial adopted for such declaration ;

(*c*) whether there are any difficulties for the Government in declaring North Kanara District as most backward area ;

(*d*) if not, the probable time required for declaring this district as most backward area ?

SRI D. DEVARAJ URS (Chief Minister).—

(*a*) and (*b*) During the Fourth Five Year Plan a composite development index based on 13 indicators was constucted and taking into account this index, the *per capita* income and other consideration. Bidar District was deemed to be the most backward District in the State. In the draft 5th plan a composite development index has been constructed using 22 indicators and Gulbarga District has emerged as a highly backward District.

(*c*) and (*d*) Though according to these indicators the North Kanara District is close to the State average, it is industrially a backward district. The Planning Commission have identified 11 Industrially backward districts of which North Kanara is one. Of these, 3 Districts have been selected to be eligible for Subsidy by Central Government on new capital investment on industries. The State Government will consider the question of declaring North Kanara District as industrially a most backward district when further proposals are called for by the Planning Commission.

ಶ್ರೀಮತಿ ರಾಧಾಭಟ್.— ಸ್ವಾಮಿ, ಅಭಿವೃದ್ಧಿ ಸೂಚಿ ಪ್ರಕಾರ ಉತ್ತರ ಕನ್ನಡ ಜಿಲ್ಲೆಯು ಯಾವ ಸ್ಥಾನದಲ್ಲಿದೆ. ಮತ್ತು ಅಭಿವೃದ್ಧಿ ಸೂಚಿಯನ್ನು ತಯಾರಿಸುವಾಗ ಯಾವ ಯಾವ ಅಂಶವನ್ನು ಪರಿಗಣಿಸ ಲಾಗಿದೆ?

† ಶ್ರೀ ಡಿ. ದೇವರಾಜ್ ಅರಸ್ — ಅಭಿವೃದ್ಧಿ ಸೂಚಿಗಳ ಪ್ರಕಾರ ೧೧ ಜಿಲ್ಲೆಗಳು ಹಿಂದುಳಿದಿವೆ ಎನ್ನುವುದರಲ್ಲಿ ಉತ್ತರ ಕನ್ನಡ ಜಿಲ್ಲೆಯು ಒಂದು. ಈಗ ಉತ್ತರದಲ್ಲಿ ಕೊಟ್ಟಿರುವ ಹಾಗೆ ೧೩ ಇಂಡಿಕೇಟರ್ಸ್ ಎಂದರೆ ೧೩ ಸೂಚಿಗಳು ನಾಲ್ಕನೆ ಯೋಜನೆ ಕಾಲದಲ್ಲಿ ಕೊಟ್ಟಿದ್ದಾರೆ, ಈಗ ೨೨ ಸೂಚಿ ಗಳನ್ನು ಕೊಟ್ಟಿದ್ದಾರೆ ನಾಲ್ಕನೇ ಯೋಜನೆಯಲ್ಲಿ ಕೊಟ್ಟ ಸೂಚಿಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆ ಸಧ್ಯದಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಆಗುವುದಕ್ಕೆ ಸಾಧ್ಯವಿಲ್ಲ. ಅದು ಒಂದು ಅ್ಯವರೇಜ್ ಡೆವಲಪ್‌ಮೆಂಟ್ ಎಂದೂ ಇಟ್ಟುಕೂಂಡರೆ, ಉತ್ತರ ಕನ್ನಡ ಜಿಲ್ಲೆ ಸ್ಟೇಟ್ ಎ್ಯವರೇಜ್‌ಗೆ ಬಹಳ ಹತ್ತಿರವಾಗಿರುವುದರಿಂದ ಅದನ್ನು ಮೋಸ್ಟ್ ಬ್ಯಾಕ್‌ವರ್ಡ್ ಎಂದು ಪರಿಗಣಿಸಲಿಲ್ಲ. ಈ ೨೨ ಸೂಚಿಗಳು ಯಾವುವು ಎಂಬುದು ಈ ರೀತಿ ಇವೆ.

1. Density of population.
2. Percentage of urban population in the tatal population.
3. Percentage of non-agricultural workers of total works.
4. Net areas sowa as percentage of total area.
5. Total crop area of percentage of net area.
6. Net areas sowa as percentage of cultivable lands.
7. Average yield cereals per hectare.
8. Average yield of pulses per hectare.

9. Number of industrial establisment as percentage of State total.

10. Net area irrigated as percentage of net area sown.

11. Number of vehicles per lakh of population.

12. Road length per 1000 Sq. K.Ms.

13. Population served by Bank Offices.

14. Value of turnover for regulated market.

15. Percentage of labour in total population.

16. Number of vehicles per lakh of population.

17. Population per University Educational Institutions.

18. Population served by one Health Unit.

19. Number of beds per lakh of population.

20 Number of Town and Villages electrified as percentage total of Towns and Villages in the District.

21. Number of Irrigation Pumpsets electrified as percentage of State total.

22. Average yield per hectare. ಇವೆಲ್ಲಾ ಸೂಚಿಗಳು.

ಶ್ರೀಮತಿ ರಾಧಾಭಟ್.— ಅಧ್ಯಕ್ಷರೆ, ಈಗ ಅವರು ವಿವರವಾಗಿ ಹೇಳಿದ್ದರಿಂದ ನಾನು ಮತ್ತೊಂದು ಸಣ್ಣ ಪ್ರಶ್ನೆ ಕೇಳುತ್ತೇನೆ, ಅದು ಏನೆಂದರೆ ಇನ್ನಾದರೂ ಕೂಡ ರಾಜ್ಯಸರ್ಕಾರದವರು ಉತ್ತರ ಕನ್ನಡ ಜಿಲ್ಲೆಯನ್ನು ಹಿಂದುಳಿದ ಪ್ರದೇಶ ಎಂದು ಸಾರಲು ಪ್ರಯತ್ನ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಇದನ್ನು ಮುಂದಿನ ಸಾರಿ ನೋಡೋಣ. ಈಗ ೧೧ ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್‌ಗಳು ಇವೆ ಅದರಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಗುಲ್ಬರ್ಗ ಎಂದು ಪರಿಗಣಿಸಿದೆ. ಇನ್ನೊಂದು ಸಾರಿ ಇದನ್ನು ನೋಡೋಣ.

ಶ್ರೀ ಜಯಪ್ರಕಾಶ್ ನಾರಾಯಣ್.— ಸ್ವಾಮಿ, ಈಗ ೧೩ ಮತ್ತು ೨೨ ಸೂಚಿಗಳನ್ನು ಹೇಳಿದ್ದೀರಿ, ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಯೋಗ್ಯವಾದಂಥ ಕಚ್ಚಾಸಾಮಾನುಗಳು ದೊರೆಯಂತ್ತವೆ ಅದಕ್ಕೋಸ್ಕರ ಇಲ್ಲಿ ಇಂಡಸ್ಟ್ರೀಸ್ ಆರ್ಗನೈಸೇಷನ್ ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ ಎಂದು ಕೈಗಾರಿಕಾ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದರು, ಅವರ ಅಭಯತೆ ಯಾವ ಯಾವ ಕೈಗಾರಿಕೆಗಳನ್ನು ಮಾಡುತ್ತೀರಿ? ಇಲ್ಲಿ ಕೈಗಾರಿಕೆಗೆ ಯೋಗ್ಯವಾಗಿರುವುದರಿಂದ ಯಾವ ಯಾವ ಕೈಗಾರಿಕೆಗಳನ್ನು ಮಾಡುತ್ತೀರಾ ಆಪ್ಪಣೆ ಕೊಡಿಸುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.— ಅವರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.— ಅತ್ಯಂತ ಹಿಂದುಳಿದ ಜಿಲ್ಲೆಯಲ್ಲಿ ನಮ್ಮ ಶಿವಮೊಗ್ಗ ಜಿಲ್ಲೆ ಸೇರಿದೆಯೇ? ಅಲ್ಲಿ ಹಳೆಯ ಕಬ್ಬಿಣದ ಕಾರ್ಖಾನೆ ಇರುವುದರಿಂದ ಅದನ್ನು ಮರೆತು ಪರಿಗಣಿಸುವುದಾದರೆ ಅದೇರೀತಿ ಹಳೇ ಸಕ್ಕರೆ ಕಾರ್ಖಾನೆ ಇದ್ದಂಥ ಮಂಡ್ಯದಲ್ಲಿ ಸ್ಕೂಟರ್ ಕಾರ್ಖಾನೆ ಏತಕ್ಕೆ ಪ್ರಾರಂಭ ಮಾಡಿದರು?

ಶ್ರೀ ಡಿ. ದೇವರಾಜ್ ಅರಸ್.— ದೊಡ್ಡ ದೊಡ್ಡ ಜಿಲ್ಲೆಗಳಿಂದ ಶ್ರೀಮಾನ್ ಲಿಂಗಪ್ಪನವರು ಬರುತ್ತಿಲ್ಲ, ಆದರೂ ಕೂಡ ಅದನ್ನು ಬ್ಯಾಕ್‌ವರ್ಡ್ ಎಂದು ಪರಿಗಣಿಸಿ ಬಿಟ್ಟಿದ್ದಾರೆ though it is not backward ಮಂಡ್ಯದಲ್ಲಿ ಏತಕ್ಕೆ ಆಯಿತು ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ಬೇರ ಉತ್ತರ ಹೇಳುತ್ತೇನೆ. ಶಿವಮೊಗ್ಗದಲ್ಲಿ ಏನು ಆಗಬೇಕು ಎಂದು ಕೇಳಲಿ.